







ತಿಪಟೂರು ಕೃಷಿ ಉತ್ಪನ್ನ ಮಾರುಕಟ್ಟೆಯ ಮಂಡಿಯಲ್ಲಿರುವ 'ರೈತಬಂಧು' ಮುಖ್ಯಸ್ಥ ಶ್ರೀಕಾಂತ್ ಕೆಳಹಟ್ಟಿ

# ಕೊಬ್ಬರಿ ದುನಿಯಾ

(49ನೇ ಪುಟದಿಂದ)

ಮಾರುಕಟ್ಟೆಗಳಿಂದಲೇ ಖರೀದಿಸುತ್ತವೆ. ಇಲ್ಲಿ ರೈತರಿಗೆ ಬೆಲೆ ಚೌಕಾಶಿಯ ಅವಕಾಶವೂ ಸೀಮಿತವಾಗಿತ್ತು. ಹಿಂದಿನ ಎಪಿಎಂಸಿ ಕಾಯ್ದೆ ರೈತರನ್ನು ಭೂಮಾಲೀಕರಿಂದ ಬಚಾವು ಮಾಡುವ ಉದ್ದೇಶದಿಂದಲೇ ಕೂಡಿತ್ತು. ಆದರೆ, ಮಧ್ಯವರ್ತಿಗಳು ಇದನ್ನೇ ಲೂಟಿಗೆ ರಹದಾರಿ ಮಾಡಿಕೊಂಡು ಬೆಲೆ ಮತ್ತು ಪಾವತಿಯಲ್ಲಿ ಮೋಸ ಮಾಡುತ್ತಿದ್ದರು ಎನ್ನುವ ಆರೋಪ ರೈತರದು.

ವ್ಯವಸ್ಥೆ ಸುಧಾರಣೆಗೆ ಸರ್ಕಾರಗಳು ಯತ್ನಿಸಿವೆ. ರೈತರು ತಮ್ಮ ಉತ್ಪನ್ನ-ಗಳನ್ನು ಮಾರುಕಟ್ಟೆ ಸಮಿತಿ ಮಂಡಿಗಳಲ್ಲಿ ಲಾಗಾಯತ್ತಿನಂತೆ ಮಾರುವ ಬದಲಿಗೆ ನೇರ ವಹಿವಾಟು ಸಾಧ್ಯವಾಗಿಸಲು ಕಳೆದ ಒಂದು ದಶಕದಿಂದ ಆನ್ ಲೈನ್ ವ್ಯವಸ್ಥೆಯನ್ನು ಜಾರಿಗೊಳಿಸಿದ್ದು ಹೊಸ ಹೆಜ್ಜೆ. ಅದೀಗ ಕ್ರಿಯಾಶೀಲ-ವಾಗಿದೆ. ಈ ಹಿಂದೆ ಮಧ್ಯವರ್ತಿಗಳ ಮಸಲತ್ತಿನಿಂದ ಕಠಿಣವಾಗಿದ್ದ ರೈತರ ಕೈಸೇರುವ ಹಣ ಆನ್‌ಲೈನ್ ವ್ಯವಹಾರದಿಂದ ನೇರ ಅವರ ಬ್ಯಾಂಕ್ ಖಾತೆಗೆ ಜಮಾ ಆಗುತ್ತಿದೆ. ಮಧ್ಯವರ್ತಿ ಹಣ ಬಾಕಿ ಉಳಿಸಿಕೊಳ್ಳುವ ಪ್ರಮೇಯವೇ ಇಲ್ಲಿಲ್ಲವಾದ್ದರಿಂದ ಪಾರದರ್ಶಕತೆ ನಿರೀಕ್ಷಿಸಬಹುದಾಗಿದೆ.

## ತಿಪಟೂರು ಮಾದರಿ

ಭಾಗದ ಕೃಷಿಕರ ಕೊಬ್ಬರಿ ಉತ್ಪನ್ನಕ್ಕೆ ತಿಪಟೂರಿನ ಬೃಹತ್ ಮಾರುಕಟ್ಟೆ-ಯಲ್ಲಿ ಪ್ರತಿ ಶನಿವಾರ ಮತ್ತು ಬುಧವಾರ ಹರಾಜು ನಡೆಯುತ್ತದೆ. ದೇಶ-ದಲ್ಲಿರುವ ಕನಿಷ್ಠ ಏಳು ಸಾವಿರ ಸಗಟು ಮಾರುಕಟ್ಟೆಗಳಲ್ಲಿ ಹೊಸ ಎಪಿಎಂಸಿ ಕಾಯ್ದೆಯನ್ವಯ ಆನ್‌ಲೈನ್ ವಹಿವಾಟುವಿಗೆ ವ್ಯವಸ್ಥೆಯಾಗಿ 350ಕ್ಕೂ ಹೆಚ್ಚು ಸಗಟು ಮಾರುಕಟ್ಟೆಗಳಲ್ಲಿ ಕಾರ್ಯಾರಂಭಗೊಂಡಿದೆ. ನಮ್ಮ ರಾಜ್ಯದ ದಿಟ್ಟ ಹೆಜ್ಜೆಯಿಂದಾಗಿ 35ಕ್ಕೂ ಹೆಚ್ಚು ಸಗಟು ಮಾರುಕಟ್ಟೆಗಳಲ್ಲಿ ಆನ್‌ಲೈನ್ ವಹಿ-ವಾಟು ಯಶಸ್ವಿಯಾಗಿದೆ. ತಿಪಟೂರು ಇದಕ್ಕೊಂದು ಮಾದರಿ. ಕಳೆದ ಕೆಲ ವರ್ಷಗಳ ಹಿಂದಷ್ಟೇ ಸೋಮಶೇಖರ ನ್ಯಾಮಗೌಡ ಎನ್ನುವ ಎಪಿಎಂಸಿ ಅಧಿಕಾರಿಯ ದಕ್ಷತೆಯಿಂದಾಗಿ ಆನ್‌ಲೈನ್ ವ್ಯವಸ್ಥೆ ಒಳ್ಳೆಯ ಆರಂಭ ಪಡೆದುಕೊಂಡು ರೈತರಿಗೆ ಅನುಕೂಲಗಳು ದಕ್ಕುವಂತಾಗಿತ್ತು. ಅವರು ವರ್ಗಾವಣೆಯಾಗಿದ್ದರೂ ಕೈಗೊಂಡ ಸುಧಾರಣಾ ಕ್ರಮಗಳು ಚಾಲ್ತಿಯಲ್ಲಿವೆ. ಭಾಗದ ರೈತರು ಅವರನ್ನು ತುಂಬ ಸ್ಮರಿಸಿಕೊಳ್ಳುತ್ತಾರೆ.

ದೇಶದ 21 ರಾಜ್ಯಗಳು ಸಗಟು ಮಾರುಕಟ್ಟೆಗಳನ್ನು ಇ-ವೇದಿಕೆಯೊಂದಿಗೆ (ಆನ್‌ಲೈನ್) ಸಂಪರ್ಕಿಸಲು ನಿರ್ಧರಿಸಿವೆ. ಉತ್ತರ ಪ್ರದೇಶ, ಮಧ್ಯಪ್ರದೇಶ, ಹರಿಯಾಣ ಮತ್ತು ಗುಜರಾತ್ ಮುಂಚೂಣಿ ರಾಜ್ಯಗಳು. ಬಿಹಾರ ಎಪಿಎಂಸಿ ಹಳೆಯ ಕಾಯ್ದೆಯನ್ನು ರದ್ದುಪಡಿಸಿ ಹೊಸತನ್ನು ಅಳವಡಿಸಿಕೊಂಡಿದೆ.

2017ರ ಹೊಸ ಎಪಿಎಂಸಿ ಕಾಯ್ದೆಯಿಂದ ರೈತರಿಗೂ ಅಧಿಕ ಲಾಭದ ನಿರೀಕ್ಷೆಯಿದೆ. ಗುತ್ತಿಗೆ ಕೃಷಿ ಕಾನೂನು ನೆರವಿನಿಂದಲೂ ಅಧಿಕ ಲಾಭವಿದೆ. ಪಂಜಾಬ್ ಸರ್ಕಾರ ಪ್ರತ್ಯೇಕ ಗುತ್ತಿಗೆ ಕೃಷಿ ಕಾನೂನು ರೂಪಿಸಿಕೊಂಡಿದೆ. ಕೃಷಿ ಸಚಿವಾಲಯ ರೂಪಿಸುವ ಮಾದರಿ ಕಾನೂನುಗಳಿಂದ ಆಯಾ ರಾಜ್ಯ ಸರ್ಕಾರಗಳ ಬೊಕ್ಕಸಕ್ಕೆ ಯಾವುದೇ ಆದಾಯವಿಲ್ಲ ಎನ್ನುವುದು ಗಮನಾರ್ಹ.

## 'ರೈತ ಬಂಧು'

ಶ್ರೀಕಾಂತ ಕೆಳಹಟ್ಟಿ ನೇತೃತ್ವದಲ್ಲಿ ಎಪಿಎಂಸಿ ಮಂಡಿಯಲ್ಲಿ 'ರೈತ ಬಂಧು' ಎನ್ನುವ ವಿಭಿನ್ನ ವಹಿವಾಟು ವೇದಿಕೆಯೊಂದನ್ನು ರೈತ ಗುಂಪು ರೂಪಿಸಿ-ಕೊಂಡಿದೆ. ತೆಂಗು ಬೆಳೆಗಾರರಿಗೆ ನ್ಯಾಯ ಒದಗಿಸಲು ಆನ್‌ಲೈನ್ ಅಥವಾ ಇ-ಮಾರ್ಕೆಟಿಂಗ್ ಅನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಯತ್ನಿಸುತ್ತಿದೆ. ಇ-ವ್ಯವಹಾರದಲ್ಲಿ ರೈತರನ್ನು ತೊಡಗಿಸುವ ಮೂಲಕ ಇದನ್ನೊಂದು ಚಳವಳಿಯನ್ನಾಗಿಸಲು ಶ್ರಮಿಸುತ್ತಿದೆ. ರೈತರೂ ಸ್ಪಂದಿಸಿದ್ದರಿಂದ ಲಕ್ಷಾಂತರ ರೂಪಾಯಿ ವಹಿವಾಟುವಿನೊಂದಿಗೆ ರಾಜ್ಯದ ಮಾದರಿ ರೈತ ವೇದಿಕೆಯಾಗಿದೆ.

ಗುಣಮಟ್ಟದ ಕೊಬ್ಬರಿಗೆ ಸೂಕ್ತ ಬೆಲೆ ಒದಗಿಸುವುದು, ಇ-ವ್ಯವಹಾರದ ಮೂಲಕ ರೈತರ ಖಾತೆಗೆ ನೇರ ಹಣ ಸಂದಾಯವಾಗುವಂತೆ ನೋಡಿಕೊಳ್ಳು-ವುದು 'ರೈತ ಬಂಧು'ವಿನ ಉದ್ದೇಶ. ತುಮಕೂರು, ಹಾಸನ ಮತ್ತಿತರ ಜಿಲ್ಲೆಗಳ ರೈತರು 'ರೈತಬಂಧು'ವಿಗೆ ಮುಗಿ ಬೀಳುತ್ತಿದ್ದಾರೆ. ಪಾರದರ್ಶಕ ಪದ್ಧತಿಯ ವ್ಯವಹಾರದಿಂದ ಅವರಲ್ಲೂ ನಂಬಿಕೆ ಮೂಡಿದ್ದರಿಂದ ತಮ್ಮ ಬೆಳೆಗಳಿಗೆ ಬೆಲೆ ಪಡೆಯುವಂಥ ಮತ್ತು ತಕ್ಷಣ ಹಣ ಕೈಗೆ ದಕ್ಕುವಂಥ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಬೆಲೆ, ಧಾರಣೆ ಮತ್ತು ಮಾರುಕಟ್ಟೆ ಬೇಡಿಕೆಗಳ ಬಗ್ಗೆ ಮಾಹಿತಿಗಳನ್ನು ಮೊಬೈಲ್ ಆ್ಯಪ್‌ಗಳ ಮೂಲಕವೇ ತಿಳಿದುಕೊಳ್ಳುತ್ತಿದ್ದಾರೆ. ಬ್ಯಾಂಕಿಂಗ್ ವ್ಯವಹಾರದಲ್ಲೂ ತೊಡಗಿದ್ದಾರೆ.

'ಇ-ವ್ಯವಹಾರದಲ್ಲಿ ಭಾಗಿಯಾದ ಎಲ್ಲರಿಗೂ ಶ್ರಮಕ್ಕೆ ತಕ್ಕ ಲಾಭ ದಕ್ಕುವಂತೆ ಮಾಡುವ ನ್ಯಾಯ ಪರಿಕಲ್ಪನೆ ನಮ್ಮದು' ಎನ್ನುತ್ತಾರೆ 'ರೈತಬಂಧು' ರೂವಾರಿ ಶ್ರೀಕಾಂತ್.